ಇ) ಹಾಗಿದ್ದಲ್ಲಿ, ಬಾಕಿ ಇರುವ ಸಂತ್ರಸ್ಥರಿಗೆ ವಿತರಿಸಲು ಬೇಕಾಗುವ ಹಣ ಎಷ್ಟು ;

ಈ) ಬಾಕಿ ಅರ್ಜಿದಾರರಿಗೆ ಪರಿಹಾರ ಧನವನ್ನು ಯಾವಾಗ ವಿತರಿಸಲಾಗುವುದು ;

ಉ) ಬಾಕಿ ಅನುದಾನ ಬಿಡುಗಡೆಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ಯಾರಿಗೆ-ಯಾವಾಗ ಸಲ್ಲಿಸಲಾಗಿದೆ, ಅದಕ್ಕೆ ಸರ್ಕಾರದ ನಿಲುವೇನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) –

ಅ) 1999ನೇ ಸಾಲಿನವರೆಗೆ ಅಂಶಿಕವಾಗಿ ವಿತರಿಸಲಾಗಿದೆ. 1999ನೇ ಸಾಲಿನ ಇನ್ನು 81 ಪ್ರಕರಣಗಳು ಬಾಕಿ ಇರುತ್ತವೆ.

ಆ) ಬಾಕಿ ಇರುವ ಅರ್ಜಿಗಳು 3475.

ಹೌದು.

ಇ) ರೂ. 3,47,30,000.00

ಈ) ರಾಜ್ಯದ ಎಲ್ಲಾ ಜಿಲ್ಲೆಗಳ ಬೇಡಿಕೆಗಳನ್ನು ಅನುಸರಿಸಿ ಬಾಕಿ ಇರುವ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಉ) ಪ್ರಸ್ತಾವನೆ ಸಲ್ಲಿಸಲಾಗಿದೆ. ಬಾಕಿ ಅನುದಾನದ ಬಿಡುಗಡೆ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

254 (925) – ಶ್ರೀ ರಘುಪತಿ ಭಟ್ ಕೆ. (ಉಡುಪಿ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರಾವಳಿ ತೀರದಲ್ಲಿ ಸಿ.ಆರ್.ಝಡ್ ನಿಯಮದಿಂದಾಗಿ ಬಡ ನಿವೇಶನ ರಹಿತರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಸಿ.ಆರ್.ಝಡ್. ನಿಯಮ ಸಡಿಲಿಕೆಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಸಿ. ಚನ್ನಿಗಪ್ಪ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)–

ಅ) ಬಂದಿರುತ್ತದೆ.

ಆ) ಈಗಿರತಕ್ಕ ಕಡಲತೀರ ನಿಯಂತ್ರಣ ವಲಯದ ಅಧಿಸೂಚನೆ ಸಂಖ್ಯೆ : ಎಸ್.ಒ. 114(ಇ) ದಿನಾಂಕ: 19.02.1991 ಅನ್ನು ಪರಿಷ್ಕರಿಸಬೇಕೆಂಬ ಜನಪ್ರತಿನಿಧಿಗಳ ಈ ಕೆಳಕಂಡ ಮನವಿಗಳನ್ನು ರಾಜ್ಯ ಸರ್ಕಾರವು ಕೇಂದ್ರಕ್ಕೆ ಸಲ್ಲಿಸಿರುತ್ತದೆ;

ಅ) ಕಟ್ಟಡ ಪರವಾನಗಿ ಇಲ್ಲದೆ ಕಡಲ ತೀರದ ಭರತ ರೇಖೆಯಿಂದ 200 ಮೀ. ಹೊರಗಡೆ ವಾಸದ ಮನೆಗಳನ್ನು ಕಟ್ಟಲು;

ಆ) ಸಿಆರ್‌ಜೆಡ್ ಕಾನೂನಿನಿಂದ ಉಡುಪಿ ಜಿಲ್ಲೆಯ ಕರಾವಳಿಯನ್ನು ಮುಕ್ತಗೊಳಿಸಲು;

ಇ) ಕರಾವಳಿ ನಿಯಂತ್ರಣ ವಲಯವನ್ನು ಈಗಿನ 500 ಮೀಟರ್‌ನಿಂದ 200 ಮೀಟರ್‌ಗೆ ಇಳಿಸಲು;

ಈ) ಕರಾವಳಿ ತೀರ ಪ್ರದೇಶದಲ್ಲಿ ಸರ್ಕಾರಿ ಖಾಲಿ ಜಮೀನಿನಲ್ಲಿ ತಾತ್ಕಾಲಿಕ ಮನೆಕಟ್ಟಿ ತಲೆತಲಾಂತರಗಳಿಂದ ವಾಸಿಸುತ್ತಿರುವ ಬಡ ಮೀನುಗಾರರಿಗೆ ಜಮೀನಿನ ಹಕ್ಕು ಪತ್ರ ನೀಡಲು;

ಮೇಲಿನ ಜನಪ್ರತಿನಿಧಿಗಳ ಮನವಿಗಳನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ದಿನಾಂಕ: 25.5.2006 ರಂದು ಸಲ್ಲಿಸಿರುತ್ತದೆ ಹಾಗೂ ದಿನಾಂಕ: 01.07.2006 ಹಾಗೂ 25.08.2006ರಂದು ಎರಡು ಜ್ಞಾಪನಾ ಪತ್ರಗಳನ್ನು ಸಹ ಸಲ್ಲಿಸಿರುತ್ತದೆ. ಆದರೆ ಈ ಬಗ್ಗೆ ಕೇಂದ್ರ ಸರ್ಕಾರವು ಇದುವರೆಗೂ ನಿರ್ಧಾರ ಕೈಗೊಂಡಿರುವುದಿಲ್ಲ.

255 (446) – ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್.) – ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸನ್ಮಾನ್ಯ ಮುಖ್ಯಮಂತ್ರಿಗಳು ಕೆ.ಜಿ.ಎಫ್.ಗೆ ಭೇಟಿ ನೀಡಿದ್ದಾಗ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಶೀಘ್ರ ನಿರ್ಧಾರ ಪ್ರಕಟಿಸುವುದಾಗಿ ಘೋಷಿಸಿರುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಹಾಗಿದ್ದಲ್ಲಿ, ಸರ್ಕಾರ ಇದನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು ;

ಆ) ಸರ್ಕಾರ ಹೊಸದಾಗಿ ಮಂಜೂರು ಮಾಡಿರುವ ಕೈಗಾರಿಕೆಗಳು ಯಾವುವು ;